

# ಸೌಂದರ್ಯವರ್ಧನೆಗೆ

# ವ್ಯಾಸೆಲಿನ್



ಡಾ. ರೂಪಾ ಕಿರಣ್

ಚರ್ಮದಲ್ಲಿ ಬಿರುಕು, ಮುಖದಲ್ಲಿ ಜಿಡ್ಡು ಜಿಡ್ಡು, ಮೊಡವೆ ಕಲೆ, ರೆಪ್ಪೆ, ಐಬ್ರೊಗಳಲ್ಲಿ ಹೊಳಪಿಲ್ಲದ್ದು... ಇವೆಲ್ಲ ಸೌಂದರ್ಯಕ್ಕೆ ಮಾರಕವಾದವು. ಹಾಗಾದರೆ ಸೌಂದರ್ಯ ಕಾಪಾಡಲು ಏನು ಮಾಡಬಹುದು? ವ್ಯಾಸೆಲಿನ್ ಜೆಲ್ಲಿ ಸುಲಭವಾಗಿ ಸಿಗುವ ಸಾಧನ. ಇದನ್ನು ಬಳಸಿದರೆ ಮುಖ, ತ್ವಚೆ, ಹುಬ್ಬು, ರೆಪ್ಪೆಗಳ ಸೌಂದರ್ಯದಲ್ಲಿ ತಾಜಾತನ ಉಂಟಾಗಬಹುದು.

ವ್ಯಾಸೆಲಿನ್ ಪೆಟ್ರೋಲಿಯಂ ಜೆಲ್ಲಿ ಬಗ್ಗೆ ನಿಮಗೆಷ್ಟು ಗೊತ್ತು? ಇದನ್ನು ಬಳಸುವುದು ಹೇಗೆ..? ಇಲ್ಲಿದೆ ಕೆಲವೊಂದು ಉಪಯುಕ್ತ ಮಾಹಿತಿಗಳು. ಒಮ್ಮೆ ಟ್ರೈ ಮಾಡಿ ನೋಡಿ!

ಕೈ ಕಾಲುಗಳ ಚರ್ಮದಲ್ಲಿ ಬಿರುಕು ಕಾಣಿಸಿಕೊಂಡು ಒಡೆದು ಹೋಗಿದ್ದರೆ ರಾತ್ರಿ ಮಲಗುವಾಗ ವ್ಯಾಸೆಲಿನ್ ಹಚ್ಚಿಕೊಳ್ಳಿ. ಮೊಣ ಕೈ ಹಾಗೂ ಮೊಣಕಾಲು ಗಂಟಿಗೆ ವ್ಯಾಸೆಲಿನ್ ಹಚ್ಚಿದರೆ ಅವುಗಳು ಬೂದು ಬಣ್ಣಕ್ಕೆ ತಿರುಗದೆ ಹೊಳಪಿನಿಂದ ಕೂಡಿರುತ್ತದೆ.

ವ್ಯಾಕ್ಸಿಂಗ್ ಮಾಡಿದ ನಂತರ ಜಿಡ್ಡು ಜಿಡ್ಡು ಅನ್ನಿಸುತಿದೆಯೇ? ಸ್ವಲ್ಪ ವ್ಯಾಸೆಲಿನ್ ಹಚ್ಚಿ ತೊಳೆದುಕೊಳ್ಳಿ, ಸರಿಹೋಗುತ್ತದೆ.

ಬಟ್ಟೆಗಳ ಮೇಲೆ ಮೇಕಪ್ ಕಲೆ ಇದೆಯಾ? ಕಲೆಗಳ ಮೇಲೆ ವ್ಯಾಸೆಲಿನ್ ಪ್ರಯೋಗಿಸಿ ನೋಡಿ.

ಲಿಪ್ ಗ್ಲೊಸ್ ಖಾಲಿ ಆಗಿದ್ಯಾ? ಸ್ವಲ್ಪ ವ್ಯಾಸೆಲಿನ್‌ಗೆ ನಿಮಗಿಷ್ಟವಾಗಿರೋ (ಹಳೆಯ)ಲಿಪ್ ಸ್ಟಿಕ್ ಸೇರಿಸಿ ಇಟ್ಟುಕೊಳ್ಳಿ.







ಶೇವಿಂಗ್ ಮಾಡೋ ಮೊದಲು ಸ್ವಲ್ಪವೇ ಸ್ವಲ್ಪ ವ್ಯಾಸೆಲಿನ್ ಹಚ್ಚಿ (ಜಾಸ್ತಿ ಹಚ್ಚಿದರೆ ರೇಜರ್ ತುಂಬಾ ವ್ಯಾಸೆಲಿನ್ ಹಿಡಿದು ಬಿಡುತ್ತೆ!) ನೀರು ಬೆರೆಸದೆ ಶೇವಿಂಗ್ ಮಾಡಿದ್ರೆ ಚರ್ಮ ಬಿರುಸಾಗಿರುವುದಿಲ್ಲ. ವ್ಯಾಸೆಲಿನ್ ಮಾಯಿಸ್ಚರೈಸರ್ ತರ ಕೆಲಸ ಮಾಡುತ್ತದೆ.

ರೆಪ್ಪೆಗಳಿಗೆ ವ್ಯಾಸೆಲಿನ್ ಹಚ್ಚಿ ಮಲಗುವುದರಿಂದ ರೆಪ್ಪೆಗಳು ಉದ್ದವಾಗಿ, ಕಪ್ಪಾಗಿ ಹೊಳಪಿನಿಂದ ಕೂಡಿರುತ್ತದೆ.!

ಐ ಶ್ಯಾಡೋ ಹಚ್ಚುವ ಮೊದಲು ವ್ಯಾಸೆಲಿನ್ ಹಚ್ಚಿದರೆ ಐ ಶ್ಯಾಡೋ ಹೊಳೆಯುತ್ತದೆ.!

ಐ ಬ್ರೊ ಮಾಡಿಸುವಾಗ ತುಂಬಾ ನೋವಾಗುತ್ತಾ? ಹೀಗೆ ಮಾಡಿ–ಬಿಸಿ ನೀರಿನಿಂದ ಸ್ನಾನ ಮಾಡಿದ ನಂತರ ಹುಬ್ಬುಗಳಿಗೆ ಸ್ವಲ್ಪ ವ್ಯಾಸೆಲಿನ್ ಹಚ್ಚಿ ಮಾಲಿಷ್ ಮಾಡಿ.

ಕಣ್ಣಿಗೆ ಹಚ್ಚಿದ ಮಸ್ಕರಾ ತೆಗೆಯಲು ಕಷ್ಟ ಆಗುತ್ತಿದೆಯೇ? ಚಿಂತೆ ಬಿಡಿ, ರೆಪ್ಪೆಗಳಿಗೆ ಸ್ವಲ್ಪ ವ್ಯಾಸೆಲಿನ್ ಹಚ್ಚಿ ತೆಗೆಯಿರಿ.

ಮೊಡವೆಯಿಂದಾದ ಕಲೆಗಳನ್ನು ಮಾಸುವಂತೆ ಮಾಡುವುದು.

ಗರ್ಭಿಣಿಯರು ಮೊದಲ ತಿಂಗಳಿನಿಂದನೇ ಹೊಟ್ಟೆ ಮೇಲೆ ವ್ಯಾಸೆಲಿನ್ ಹಚ್ಚುತ್ತಾ ಬಂದರೆ ಪ್ರಸವ ಆದ ಮೇಲೆ ಸ್ಟ್ರೆಚ್ ಮಾರ್ಕ್ಸ್ ಉಳಿಯದೆ ಚರ್ಮ ನುಣುಪಾಗಿರುತ್ತದೆ.

ಹಳೆಯ ಗಾಯದ ಮೇಲೆ ಹಚ್ಚಿದರೆ ಬೇಗ ಗುಣವಾಗುತ್ತದೆ.

ಚಿಕ್ಕ ಮಕ್ಕಳಿಗೆ ಹಚ್ಚುವುದರಿಂದ ಚರ್ಮವು ನುಣುಪಾಗಿ, ಹೊಳೆಯುವುದು ಅಲ್ಲದೇ ಚರ್ಮವು ಒಡೆಯುವುದಿಲ್ಲ.

ಡಯಾಪರ್ ರ್‍ಯಾಶ್(ಉರಿಯೂತ)ನಿಂದ ಮಗು ರಾತ್ರಿಯೆಲ್ಲ ಅಳ್ತಾ ಇದ್ರೆ ಸ್ವಲ್ಪ ವ್ಯಾಸೆಲಿನ್ ಹಚ್ಚಿ ಬಿಡಿ, ಬೆಳಿಗ್ಗೆ ಮಗು ನಗು ನಗ್ತಾ ಏಳುತ್ತೆ! ■